2 ನೇ ಜೆ. ಎಂ. ಎಫ್. ಸಿ ನ್ಯಾಯಾಲಯ, ಹುಬ್ಬಳ್ಳಿ.

**ಸಿ.ಸಿ. ನಂಃ 1248/2024**

PW: 10
CW: 16

| | |
|---|---|
| ಸಾಕ್ಷಿದಾರರ ಹೆಸರು | : ಡಿ ವಿ ಪಾಟೀಲ |
| ವಯಸ್ಸು | : 56 ವರ್ಷ |
| ಉದ್ಯೊಗ | : ಎ ಎಸ್ ಐ |
| ವಾಸಸ್ಥಳ | : ಕುಂದಗೋಳ |

ಪ್ರಮಾಣ ವಚನವನ್ನು ಬೋದಿಸಲಾಯಿತು. ದಿನಾಂಕಃ 24.06.2026

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ನಾನು ಹುಬ್ಬಳ್ಳಿಯ ಗ್ರಾಮೀಣ ಪೋಲೀಸ ಠಾಣೆಯಲ್ಲಿ ಎ ಎಸ್ ಐ ಆಗಿ 2022 ರಿಂದ ಇಲ್ಲಿಯವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 27.01.2024 ರಂದು ಮ.2.30 ಗಂಟೆಗೆ ನಾನು ಠಾಣಾಧಿಕಾರಿ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನಿಪಿ 1 ರಂತೆ ನೀಡಿದ ದೂರನ್ನು ಸ್ವೀಕರಿಸಿ ಗುನ್ನಾ ಸಂಖ್ಯೆ ಃ 18/2024 ರಲ್ಲಿ ಪ್ರಕರಣ ದಾಖಲಿಸಿ ಮಾನ್ಯನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ಸಲ್ಲಿಸಿದೆ. ನಿಪಿ 1 ರಲ್ಲಿರುವ ಸಾಕ್ಷಿಯ ಸಹಿ 1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿ **ನಿಪಿ 12** ಎಂದು ಗುರುತಿಸಲಾಯಿತು.

ಅದೇ ದಿನ ಕಿಮ್ಸ ಆಸ್ಪತ್ರೆಗೆ ಶವಾಗಾರಕ್ಕೆ ಭೇಟಿ ನೀಡಿ ಮೃತ ಸಿದ್ದಲಿಂಗೇಶ ಇತನ ಶವ ಪಂಚಾನಮೆಯನ್ನು ಜರುಗಿಸಿದೆನು. ಸದರಿ ಪಂಚನಾಮೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ನಂತರ ಮೃತನ ಪಿ ಎಮ್ ಕುರಿತು ಸಿಬ್ಬಂದಿ ಮೂಲಕ ವೈದ್ಯರಿಗೆ ಮನವಿ ಪತ್ರವನ್ನು ಸಲ್ಲಿಸಿದೆನು.

ಮುಂದಿನ ತನಿಖೆಯನ್ನು ಚಾ ಸಾ 17 ರವರಿಗೆ ವಹಿಸಿದೆನು.

**ಪಾಟೀ ಸವಾಲು ಃ 1 ನೇ ಆರೋಪಿ ಪರ ವಕೀಲರಿಂದಃ**

ನಿಪಿ-1 ದೂರನ್ನು ಪ್ರಕರಣಕ್ಕೆ ಅನೂಕುಲವಾಗುವಂತೆ ನಾವೇ ತಯಾರಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 2 ಹಾಗೂ 3 ನೇ ಆರೋಪಿ ಪರ ವಕೀಲರಿಂದಃ**

ಚಾ ಸಾ 1 ರವರು ದೂರು ನೀಡಿದ್ದಾರೆ ಎನ್ನಲಾದ ಸಮಯಕ್ಕೆ ಮುಂಚೆ ಸದರಿ ಅಪಘಾತದ ಬಗ್ಗೆ ಯಾವುದೇ ಇರಲಿಲ್ಲ. ಆಸ್ಪತ್ರೆಯಿಂದ ಎಮ್ ಎಲ್ ಸಿ ಮಾಹಿತಿ ಬಂದಾಗ ಪ್ರಕರಣ ದಾಖಲಿಸುತ್ತೆವೆ ಎಂದರೆ ಸಾಕ್ಷಿಯು ದೂರುದಾರರು ಠಾಣೆಗೆ ಬಂದು ದೂರು ನೀಡಿದರೆ ಮಾತ್ರ ದಾಖಲಿಸುತ್ತೇವೆ ಎಂದು ನುಡಿಯುತ್ತಾರೆ. ಆ ದಿನ ಬೆ.10.30 ಗಂಟೆಗೆ ಆಸ್ಪತ್ರೆಯಿಂದ ನಮ್ಮ ಠಾಣೆಗೆ ಸದರಿ ಅಪಘಾತದ ಬಗ್ಗೆ ಎಮ್ ಎಲ್ ಸಿ ಮಾಹಿತಿ ಬಂದಿತ್ತು ಎಂದರೆ ನಿಜ. ಸದರಿ ಎಮ್ ಎಲ್ ಸಿ ಆಧಾರದ ಮೇಲೆ ಪ್ರಕರಣ ದಾಖಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಗಾಯಾಳು ಸಿದ್ದಲಿಂಗೇಶ ಇತನಿಗೆ ಸೀರಿಯಸ್ ಇದ್ದ ಕಾರಣ ಆ ಮೇಲೆ ಠಾಣೆಗೆ ಬಂದು ದೂರು ಕೊಡುತ್ತೇವೆ ಎಂದು ಹೇಳಿದ್ದರು.

ಚಾ ಸಾ 1 ರವರು ಸ್ವಿಪ್ಟ ಡಿಸೈರ್ ಕಾರಿನಿಂದ ಮಾತ್ರ ಅಪಘಾತವಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ ಎಂದರೆ ಸಾಕ್ಷಿಯು ಎರಡು ಕಾರು ಮುಖಾ ಮುಹಿ ಡಿಕ್ಕಿಯಾಗಿದೆ ಎಂದು ನುಡಿಯುತ್ತಾರೆ. ಮೃತ ಸಿದ್ದಲಿಂಗೇಶ ಇತನ ಕುಟುಂಬಕ್ಕೆ ಪರಿಹಾರ ಕೊಡಿಸುವ ಉದ್ದೆಶದಿಂದ 2 ನೇ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಮೊದಲೇ ಟೈಪ್ ಮಾಡಿಸಿಕೊಂಡು ತಂದಿದ್ದರು. ಅದನ್ನು ಠಾಣೆಯಲ್ಲಿ ಟೈಪ್ ಮಾಡಿಸಿಲ್ಲ. ದೂರನ್ನು ಲಿಖಿತ ಅಥವಾ ಹೇಳಿಕೆಯಲ್ಲಿ ನೀಡಿಲಾಗಿದೆ ಎಂಬ ವಿಚಾರವನ್ನು ಪ್ರ. ವರದಿಯ 3 ನೇ ಕಾಲಂ ನಲ್ಲಿ ತೋರಿಸುತ್ತೇವೆ ಎಂದರೆ ನಿಜ. ನಿಪಿ-12 ರ ಕಾಲಂ 3 ರಲ್ಲಿ ಹೇಳಿಕೆ ದೂರು ನೀಡಿದ್ದಾರೆ ಎಂದು ದಾಖಲಿಸಿದ್ದೇನೆ ಎಂದರೆ ನಿಜ. ನಿಪಿ-1 ನ್ನು ಚಾ ಸಾ 1 ರವರು ನೀಡದೇ ಇದ್ದರೂ ಸಹ ಅದನ್ನು ಆ ನಂತರ ನಾನೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ .ಹೇ .ಕೇ ಸರಿ ಇದೆ.

Sd/-

2 ನೇ ಜೆ. ಎಮ್. ಎಫ್. ಸಿ. ಹುಬ್ಬಳ್ಳಿ.